ಹರಪನಹಳ್ಳಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ

ಓ ಎಸ್ ಃ 280/2013

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಎಮ್ ಆರ್ ನಾಗರಾಜ | ಪಿ ಡಬ್ಲ್ಯೂಃ | 1 |
| ತಂದೆಯ ಹೆಸರು | ಃ ಲೇಟ್ ರಾಮಣ್ಣ | ಡಿ ಡಬ್ಲ್ಯೂಃ | |
| ವಯಸ್ಸು | ಃ 46 ವರ್ಷ | ಪ್ರಮಾಣ ವಚನ ನೀಡಲಾದ | |
| ಉದ್ಯೋಗ | ಃ ತಹಶೀಲ್ದಾರರು | ದಿನಾಂಕಃ | 30.04.2014 |
| ವಾಸಸ್ಥಳ | ಃ ಹರಪನಹಳ್ಳಿ | | |

ಮುಖ್ಯ ವಿಚಾರಣೆ ಃ ಪ್ರತಿವಾದಿ ಪರ ಶ್ರೀ ಬಿ ಆರ್ ಜಿ ವಕೀಲರಿಂದಃ

ನಾನು ದಿ.07.03.2014 ರಿಂದ ಇಲ್ಲಿಯವರೆಗೆ ಹರಪನಹಳ್ಳಿ ತಾಲ್ಲೂಕು ಕಛೇರಿಯಲ್ಲಿ ತಹಶೀಲ್ದಾರರಾಗಿ ಸೇವೆ ಸಲ್ಲಿಸುತ್ತಿದ್ದೇನೆ. ನ್ಯಾಯಾಲಯದ ಸಮನ್ಸ್ ಬಂದ ಮೇರೆಗೆ ಈ ದಾವೆಗೆ ಸಂಬಂಧಿಸಿದಂತೆ ಪ್ರತಿವಾದಿ ಪರ ವಕೀಲರು ಕೇಳಿದ ಎಲ್ಲ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. 2011 ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿನ ಅನರ್ಹ ಫಲಾನುಭವಿಗಳ ಪಟ್ಟಿಯ ದೃಡಿಕೃತನ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.2 ಎಂದು ಗುರುತಿಸಲಾಯಿತು. 1ನೇ ಪ್ರತಿವಾದಿ ವಿಶಾಲಕ್ಷಮ್ಮ ರವರ ಹೆಸರಿಗೆ ಮಂಜೂರಾದ ನಿವೇಶನದ ಸಂಖ್ಯೆ 183 ರ ಹಕ್ಕುಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿದಲ್ಲು ಅದನ್ನು ನಿಡಿ.3 ಎಂದು ಗುರುತಿಸಲಾಯಿತು. 2012 ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿನ ಅರ್ಹರ ಫಲಾನುಭವಿಗಳ ಪಟ್ಟಿಯ ದೃಡಿಕೃತನ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.4 ಎಂದು ಗುರುತಿಸಲಾಯಿತು. ಆಶ್ರಯ ಯೋಜನೆಯಡಿಯಲ್ಲಿ ನಿರ್ಮಿಸಿರುವ ಮನೆಗಳಿಗೆ ವಿದ್ಯುತ ಸಂಪರ್ಕ ಕಲ್ಪಿಸಲು ಕೋರಿಕೊಂಡ ಪತ್ರ ಮತ್ತು ಪಲಾನುಭವಿಗಳ ಹೆಸರುಗಳ ಪಟ್ಟಿಯ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.5 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ಸಿ ಜಿ ವಕೀಲರಿಂದ ಃ

ಮನೆ ಸಂಖ್ಯೆ.183 ಕ್ಕೆ ನಾನು ಹಾಜರುಪಡಿಸಿದ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳು ನಮ್ಮ ಕಛೇರಿಯಲ್ಲಿ ಲಭ್ಯ ಇರುತ್ತವೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

O.S: 64/2011
P W : 1

ಸಿವಿಲ್ ಜಡ್ಜ್ , ಹರಪನಹಳ್ಳಿ.

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು. ದಿನಾಂಕ:30.01.2015

ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರ ಶ್ರೀ ಕೆಎಸ್ ವಕೀಲರಿಂದ :

ನಾನು ಈ ದಾವೆಯಲ್ಲಿ ವಾದಿಯಾಗಿರುತ್ತೇನೆ. ನಾನು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ವಿಷಯ ನಿಜ ಮತ್ತು ಸತ್ಯ ಇರುತ್ತವೆ. ಆದ್ದರಿಂದ ಸದರಿ ಪ್ರಮಾಣ ಪತ್ರವನ್ನು ನನ್ನ ಮುಖ್ಯ ಸಾಕ್ಷ್ಯವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ನಾನು ಹಾಜರುಪಡಿಸಿರುವ ಎಲ್ಲ ದಾಖಲೆಗಳನ್ನು ನೋಡಿ ಗುರುತಿಸುತ್ತೇನೆ.

ನಮ್ಮ ಕುಟುಂಬದ ವಂಶವೃಕ್ಷವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಕ್ರಯ ಪತ್ರ ದಿ.17.01.2011 ರ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ಎಮ್ಆರ್ ಸಂಖ್ಯೆ.155/2010 ನ್ನು ಹಾಜರುಪಡಿಸಿದ್ದು ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಿಸಿದ ಒಟ್ಟು 6 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.4 ರಿಂದ ನಿಪಿ.9 ಎಂದು ಗುರುತಿಸಲಾಯಿತು. ದಾವಾ ಮನೆಯ ಹೌಸ್ ಲಿಸ್ಟ್ ಎಕ್ಸಾಟ್ರ್ಯಾಕ್ಟ್‌ನ್ನು ಹಾಜರುಪಡಿಸಿದ್ದು ಅದನ್ನು ನಿಪಿ.10 ಎಂದು ಗುರುತಿಸಲಾಯಿತು. ಆದ್ದರಿಂದ ನನ್ನ ದಾವೆ ಡಿಕ್ರಿ ಮಾಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಬಿಹೆಚ್ ವಕೀಲರಿಂದ:

ಪಾಟೀ ಸವಾಲು ಮಾಡಲು ಸಮಯ ಕೇಳಿರುತ್ತಾರೆ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಸಿವಿಲ್ ಜಡ್ಜ್ , ಹರಪನಹಳ್ಳಿ.

O.S: 64/2011
P W : 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು. ದಿನಾಂಕಃ19.02.2015
ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿಹೆಚ್ ವಕೀಲರಿಂದಃ

ನನ್ನ ತಂದೆಗೆ ಕುಂಬಾರ ಹಾಲಪ್ಪ ಎಂದು ಕರೆಯುತ್ತಿದ್ದರು. ನನ್ನ ತಂದೆ 1991ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆಗೆ ಒಟ್ಟು ಆರು ಜನ ಮಕ್ಕಳು ಇರುತ್ತೇವೆ. ಅವರುಗಳೆಂದರೆಃ- ನಾಗಪ್ಪ , ಕಮಲಮ್ಮ , ಕೊಟ್ರಮ್ಮ , ನಾನು ( ಪ್ರಭು) , ಅನ್ನಪೂರ್ಣಮ್ಮ , ಸಾವಿತ್ರಮ್ಮ. ನನ್ನ ತಂದೆ ತೀರಿಕೊಂಡಾಗ ನಾಗಪ್ಪ , ಕಮಲಮ್ಮ , ಕೊಟ್ರಮ್ಮ ಇವರ ಮದುವೆಯಾಗಿತ್ತು. ನನ್ನ ತಂದೆ ತೀರಿದ ನಂತರ ಉಳಿದ ಮಕ್ಕಳ ಮದುವೆಯನ್ನು ನನ್ನ ತಾಯಿ ಗಂಗಮ್ಮ ಮಾಡಿರುತ್ತಾರೆಂದರೆ ಸರಿ. ಕಮಲಮ್ಮ ಮತ್ತು ಕೊಟ್ರಮ್ಮ ಇವರ ಮದುವೆಯನ್ನು ನಮ್ಮ ತಂದೆ ಮಾಡಿರುತ್ತಾನೆಂದರೆ ಸರಿಯಲ್ಲ. ಸಾಕ್ಷಿಯು ಹೇಳುವುದೇನೆಂದರೆ ನಾಗಪ್ಪ , ಕಮಲಮ್ಮ , ಕೊಟ್ರಮ್ಮ ಇವರ ಮದಮೆಯನ್ನು ಮಾಡಿರುತ್ತಾನೆಂದು ಹೇಳುತ್ತಾರೆ. ನನ್ನ ತಂದೆ ಮತ್ತು ನನ್ನ ತಾಯಿ ನಮ್ಮ ಅಕ್ಕ-ತಂಗಿಯರ ಮದುವೆ ಮಾಡುವ ಕಾಲಕ್ಕೆ ಅವರ ಆಸ್ತಿಯ ಬದಲಾಗಿ ಅವರಿಗೆ ಬಂಗಾರ ಮತ್ತು ಹಣ ಕೊಟ್ಟು ಮದುವೆ ಮಾಡಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಇದ್ದಾಗೆ ನಮ್ಮ ಕುಟುಂಬಕ್ಕೆ ಎಷ್ಟು ಎಕರೆ ಜಮೀನು ಮತ್ತು ಮನೆಗಳು ಇದ್ದವು ಎಂದರೆ ಸಾಕ್ಷಿಯು ಐದು ಎಕರೆ ಜಮೀನು ಮತ್ತು ಒಂದು ಮನೆ ಇರುತ್ತದೆ ಎಂದು ಹೇಳುತ್ತಾರೆ. ನಾನು ನಮ್ಮ ಅಣ್ಣ ನಾಗಪ್ಪ ಮತ್ತು ನನ್ನ ತಾಯಿ ಗಂಗಮ್ಮ ಇವರುಗಳು ನಮ್ಮ ಕುಟುಂಬದ ಆಸ್ತಿಗಳಲ್ಲಿ ನಮ್ಮ ಅಕ್ಕ-ತಂಗಿಯರ ಮದುವೆ ಆದ ನಂತರ ಪಾಲು-ವಿಭಾಗ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. 5ನೇ ವಾದಿ ಕುಂಬಾರ ರಾಜಪ್ಪ ನಮ್ಮ ಕುಟುಂಬದ ಸದಸ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಹೇಳುವುದೇನೆಂದರೆ ಅವನಿಗೆ ನನ್ನ ಅಕ್ಕ ಕೊಟ್ರಮ್ಮಳನ್ನು ಕೊಟ್ಟು ಮದುವೆಮಾಡಿ ಕೊಟ್ಟಿದ್ದೆವು. ಸದರಿ ಕೊಟ್ರಮ್ಮಳು ತೀರಿಕೊಂಡಿರುತ್ತಾಳೆಂದರೆ ಸರಿ . ನಂತರ ನನ್ನ ತಂಗಿ ಅನ್ನಪೂರ್ಣಮ್ಮ ಇವಳನ್ನು ಕೊಟ್ಟು ಮದುವೆ ಮಾಡಿರುತ್ತೇವೆ. ಸದರಿ ಕೊಟ್ರಮ್ಮ ಇವಳಿಗೆ ಶ್ವೇತಾ ಎನ್ನುವ ಮಗಳು ಇದ್ದಳು ಅವಳು ತೀರಿಕೊಂಡಿರುತ್ತಾಳೆ. ಸದರಿ ಶ್ವೇತಾ ಇವಳು ಹದಿನೇಳು ವರ್ಷದವಳಿದ್ದಾಗೆ ಮದುವೆಯಾಗದೇ ತೀರಿಕೊಂಡಿರುತ್ತಾಳೆ. ಸದರಿ ಐದು ಎಕರೆ

ಜಮೀನಿನಲ್ಲಿ ಮೂರು ಸರ್ವೆ ನಂಬರುಗಳು ಇರುತ್ತವೆ. ಸರ್ವೆ ನಂ.84 ರಲ್ಲಿ 2.87 ಎಕರೆ ಜಮೀನು, ಸರ್ವೆ ನಂ.80 ರಲ್ಲಿ 1.05 ಎಕರೆ ಜಮೀನು, ಸರ್ವೆ ನಂ.6 ರಲ್ಲಿ 0.87 ಸಂಟ್ಸ ಜಮೀನು ಇರುತ್ತದೆ ಮತ್ತು ಮನೆ ಸಂಖ್ಯೆ-197 ಇರುತ್ತದೆ. ನನ್ನ ಅಣ್ಣ ನಾಗಪ್ಪ ಈತನು ತಾರೇಹಳ್ಳಿಯಲ್ಲಿ ಮದುವೆಯಾಗಿರುತ್ತಾನೆ. ಸದರಿ ಅಣ್ಣ ನಾಗಪ್ಪ ಮತ್ತು ನನ್ನ ಅತ್ತಿಗೆ ಇವರಲ್ಲಿ ಹೊಂದಾಣಿಕೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಹೇಳುವುದೇನೆಂದರೆ ನನ್ನ ತಾಯಿ ಗಂಗಮ್ಮ ಇವಳು ನನ್ನ ಅತ್ತಿಗೆ ಸರಿಯಾಗಿ ಇರಲಿಲ್ಲ , ಆದ್ದರಿಂದ ಅವರು ಬೇರೆ ಬೇರೆಯಾಗಿರುತ್ತಾರೆ. ನನ್ನ ಅಣ್ಣ ನಾಗಪ್ಪ ಮತ್ತು ಅತ್ತಿಗೆ ಇವರಲ್ಲಿ ಹೊಂದಾಣಿಕೆ ಇರಲಿಲ್ಲವೆಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲು ಮಾಡಲು ಸಮಯ ಕೇಳಿರುತ್ತಾರೆ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಸಿವಿಲ್ ಜಡ್ಜ್ , ಹರಪನಹಳ್ಳಿ.